ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

33

ಇಲಾಖೆ / ವಿಷಯ : DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE 5/1/2021



ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಸೋಮವಾರ ಶಾಸಕರ ಅಸಮಾಧಾನ ತಣಿಸುವ ಪ್ರಯತ್ನವಾಗಿ ಶಾಸಕರ ಜತೆ ಸಮಾಲೋಚನಾ ಸಭೆ ನಡೆಸುವ ಮುನ್ನ ಸಚಿವರು, ಶಾಸಕರೊಂದಿಗೆ ಸಿಎಂ ಯಡಿಯೂರಪ್ಪ ಕಾಣಿಸಿಕೊಂಡದ್ದು ಹೀಗೆ.

# ಬಿಎಸ್‌ವೈ-ಯತ್ನಾಳ್ ಮುಖಾಮುಖಿ

- ವಿಜಯೇಂದ್ರ ವಿರುದ್ಧ ಯತ್ನಾಳ್ ಗುಟುರು
- ಹಿರಿಯ ಶಾಸಕರಿಗೂ ಕಿಮ್ಮತ್ತಿಲ್ಲ ಎಂದ ಕತ್ತಿ

ಸಂ.ಕ. ಸಮಾಚಾರ ಬೆಂಗಳೂರು 5/1/21

ನಿರೀಕ್ಷೆಯಂತೆ ಬಿಜೆಪಿಯ ಹಿರಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಸೋಮವಾರ ಸಿಎಂ ಯಡಿಯೂರಪ್ಪ ಕರೆದಿದ್ದ ಶಾಸಕರೊಂದಿಗಿನ ಸಮಾಲೋಚನಾ ಸಭೆಯಲ್ಲಿ ಯಡಿಯೂರಪ್ಪ ಕಾರ್ಯವೈಖರಿ ಬಗೆಗೆ ನೇರವಾಗಿ ಗುಟುರು ಹಾಕಿದ್ದಾರೆ. ಅಷ್ಟೇ ಅಲ್ಲ, ಪುತ್ರ ವಿಜಯೇಂದ್ರ ಹಸ್ತಕ್ಷೇಪಕ್ಕೆ ಕಡಿವಾಣ ಹಾಕಬೇಕು ಎಂದು ನೇರಾನೇರ ಎಚ್ಚರಿಕೆ ನೀಡಿದ್ದಾರೆ.

ಮುಂಬೈ ಕರ್ನಾಟಕ ಶಾಸಕರ ಜತೆಗಿನ ಮಾತುಕತೆ ವೇಳೆ ವಿಷಯ ಪ್ರಸ್ತಾಪಿಸಿದ ಯತ್ನಾಳ, ಸರ್ಕಾರದಲ್ಲಿ ಯಾವುದೇ ಕೆಲಸ ಆಗಬೇಕಾದರೆ ವಿಜಯೇಂದ್ರ ಜತೆ ಮಾತನಾಡಬೇಕೆಂದು ಎಲ್ಲರೂ ಹೇಳುತ್ತಾರೆ. ನಿಮ್ಮ ಮಗನ ಜತೆ ನಾವೇಕೆ ಮಾತನಾಡಬೇಕು ಎಂದು ಪ್ರಶ್ನಿಸಿದರು. ಆಗ ಮಧ್ಯಪ್ರವೇಶಿಸಿದ ಸಿಎಂ ಯಡಿಯೂರಪ್ಪ, ವಿಜಯೇಂದ್ರ ಹಸ್ತಕ್ಷೇಪದ ಬಗೆಗೆ ಸ್ಪಷ್ಟನೆ ನೀಡಲು ಮುಂದಾದಾಗ, ನಾನು ಶಾಸಕನಿದ್ದೇನೆ. ನೀವು ಸಿಎಂ ಆಗಿರುವುದರಿಂದ ನಿಮ್ಮ ಜತೆ ಮಾತನಾಡುತ್ತೇನೆ. ಅದನ್ನು ಬಿಟ್ಟು ನಿಮ್ಮ ಮಗನ ಜತೆ ಏಕೆ ಮಾತನಾಡಬೇಕೆಂದು ಯತ್ನಾಳ ಕೋಪೋದ್ರಿಕ್ತರಾಗಿ ಮಾತನಾಡಿದರು. ಆಗ ಯಡಿಯೂರಪ್ಪ ಸ್ಪಷ್ಟೀಕರಣ ನೀಡುತ್ತ, ವಿಜಯೇಂದ್ರ ಹಸ್ತಕ್ಷೇಪ ನನ್ನ ಗಮನಕ್ಕೆ ಬಂದಿಲ್ಲ. ಯಾವುದೇ ಸಮಸ್ಯೆಗಳಿದ್ದರೆ ನೇರವಾಗಿ ನನ್ನ ಗಮನಕ್ಕೆ ತನ್ನಿ ಎಂದರು. ಆಗ ಯತ್ನಾಳ, ಶಾಸಕರು ಸಿಎಂ ಭೇಟಿ ಮಾಡಲು ದಿನಗಟ್ಟಲೆ ಕಾಯುವಂತಹ ಪರಿಸ್ಥಿತಿ ಇದೆ.

ಅಧಿಕಾರಿಗಳು ಕೆಲಸ ಮಾಡುತ್ತಿಲ್ಲ. ಯಾವುದೇ ಕೆಲಸ ಕೇಳಿದರೂ ಅನುದಾನ ಬಿಡುಗಡೆ ಆಗಿಲ್ಲ ಎನ್ನುತ್ತಾರೆ. ನಿಮ್ಮ ಮಗನ ಹತ್ತಿರ ಹೋದರೆ ಎಲ್ಲ ಕೆಲಸಗಳು ಆಗುತ್ತವೆ ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಪಕ್ಷಕ್ಕೆ ಹಲವಾರು ವರ್ಷಗಳಿಂದ ಕೆಲಸ ಮಾಡಿದ ಕಾರ್ಯಕರ್ತರು ಏನು ಮಾಡಬೇಕು? ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಪಕ್ಷದ ವರ್ಚಸ್ಸಿಗೆ ಧಕ್ಕೆ ಆಗಲಿದೆ ಎಂದು ಎಚ್ಚರಿಕೆ ನೀಡಿದರು.

ಆಗ ಸಿಎಂ ಯಡಿಯೂರಪ್ಪ, ನೀವು ಯಾವುದೇ ವಿಷಯಕ್ಕೆ ನನ್ನನ್ನು ಸಂಪರ್ಕಿಸಬಹುದು. ಅದನ್ನು ಬಿಟ್ಟು ನನ್ನ ವಿರುದ್ಧ ದಿನಕ್ಕೊಂದು ಹೇಳಿಕೆ ಕೊಡುತ್ತ ಹೋದರೆ ನನಗೂ, ಪಕ್ಷದ ವರ್ಚಸ್ಸಿಗೂ ಧಕ್ಕೆ ಆಗುತ್ತದೆ ಎಂದು ವಿಷಯವನ್ನು ತಣ್ಣಗಾಗಿಸುವ ಯತ್ನ ಮಾಡಿದರು. ಆಗ ಮತ್ತೊಬ್ಬ ಹಿರಿಯ ಶಾಸಕ ಉಮೇಶ್ ಕತ್ತಿ, ಮಕ್ಕಳನ್ನು ಎಲ್ಲ ರಾಜಕಾರಣಿಗಳು ನಿಯಂತ್ರಣದಲ್ಲಿ ಇಡಬೇಕು. ಹಿರಿಯ ಶಾಸಕರಾದವರು ಕೂಡ ಎಲ್ಲ ಕೆಲಸಗಳಿಗೆ ಬೆಂಗಳೂರಿಗೆ ಬರುವ ಪರಿಸ್ಥಿತಿ ಇದೆ. ನಮ್ಮ ಕ್ಷೇತ್ರದಿಂದಲೇ ದೂರವಾಣಿ ಕರೆ ಮಾಡಿದರೆ, ಕೆಲಸಗಳು ಆಗುವಂತಹ ವಾತಾವರಣ ನಿರ್ಮಾಣ ಆಗಬೇಕು ಎಂದು ವಿಷಯಾಂತರ ಮಾಡಿದರು. ಆಗ ಇನ್ನೂ ಕೆಲ ಸಚಿವರು ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪಿಸಿ, ಯತ್ನಾಳ ಮಾತಿಗೆ ಪೂರ್ಣ ವಿರಾಮ ಹಾಕಿಸುವಲ್ಲಿ ಯಶಸ್ವಿಯಾದರು.